## ಗ್ರಾಮಾಂತರ ವಿದ್ಯುದ್ದೀಕರಣದ ಬಗ್ಗೆ.

(ಳಳಖ) ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಸಕ್ತ ಸಾಲಿನಲ್ಲಿ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಗಾಗಿ ಸರ್ಕಾರದವರು ನಿಗದಿ ಪಡಿಸಿರುವ ಹಣವೆಷ್ಟು ? (ಯೋಜನಾವಾರು ಮಾಹಿತಿ ನೀಡುವುದು);

ಆ) ಆ ಪೈಕಿ ಸರ್ಕಾರದವರು ಈವರೆಗೂ ಖರ್ಚು ಮಾಡಿರುವ ಹಣವೆಷ್ಟು ;

ಇ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಮೇಲ್ಕಾಣಿಸಿರುವ ಯೋಜನೆ ಮೇರೆಗೆ ಕೈಕೊಂಡ ಕಾರ್ಯಗಳೆಷ್ಟು ಹಾಗೂ ಅವುಗಳಿಗೆ ತಗುಲಿದ ವೆಚ್ಚವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಪ್ರಸಕ್ತ ಸಾಲಿನಲ್ಲಿ ಯೋಜನಾ ಬಾಬ್ತು ಗ್ರಾಮೀಣ ವಿದ್ಯುದ್ದೀಕರಣಕ್ಕೆ ನಿಗದಿಯಾದ ಹಣ ೭೫೨ ಲಕ್ಷ ರೂಪಾಯಿಗಳು.

| ವಿವರ | ಹಣ ಲಕ್ಷ ರೂ.ಗಳು |
|---|---|
| ೧) ಗ್ರಾಮೀಣ ವಿದ್ಯುತ್ ನಿಗಮದಡಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ಯೋಜನಾ ಯೋಜನೆಗಳಂ | ೫೮೪ |
| ೨) ಮಂಡಳಿ ಕಾರ್ಯಕ್ರಮದಲ್ಲಿ ಗ್ರಾಮೀಣ ಉಪಗ್ರಾಮ ಪರಿಶಿಷ್ಟ ವರ್ಗದವರ ಕಾಲೋನಿಗಳ ವಿದ್ಯುದ್ದೀಕರಣಕ್ಕೆ | ೧೬೮ |

ಆ) ಮಂಡಳಿಯವರು ಈ ಬಾಬ್ತು ಇಲ್ಲಿಯವರೆಗೆ ೬೮೦.೨೮ ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ.

ಇ) ಬೆಂಗಳೂರು ಜಿಲ್ಲೆಯಲ್ಲಿ ೧೯೭೧ರ ಜನಗಣತಿಯಂತೆ ಶೇಕಡಾ ೧೦೦ರಷ್ಟು ರೆವಿನ್ಯೂ ಗ್ರಾಮಗಳ ವಿದ್ಯುದ್ದೀಕರಣ ನಡೆದಿದೆ. ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ೧೯೮೧ರ ಜನಗಣತಿಯಂತೆ ಇನ್ನು ೫ ಗ್ರಾಮಗಳು ವಿದ್ಯುದ್ದೀಕರಣವಾಗಬೇಕಾಗಿದ್ದು, ಇವನ್ನು ೧೯೮೮-೮೯ರಲ್ಲಿ ಮಾಡಲು ಉದ್ದೇಶಿಸಿದೆ. ಈ ಎರಡು ತಾಲ್ಲೂಕುಗಳಲ್ಲಿ ೧೯೮೨-೮೮ರ ಸಾಲಿನಲ್ಲಿ ೨೫೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಗುರಿ ಇದ್ದು ೩೧-೦೨-೧೯೮೨ರ ವೇಳೆಗೆ ೪೫೩ ಪಂಪುಸೆಟ್ಟುಗಳಿಗೆ ಒದಗಿಸಲಾಗಿದೆ.

## ಮೈಸೂರು ಕಾಗದ ಕಾರ್ಖಾನೆಯ ಕ್ಯಾಪ್ಟಿವ್ ಪ್ಲಾಂಟೇಷನ್ ಯೋಜನೆ ಬಗ್ಗೆ.

೩೭೮. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಆಥನಿ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಕಾಗದ ಕಾರ್ಖಾನೆಯಂ ಕ್ಯಾಪ್ಟಿವ್ ಪ್ಲಾಂಟೇಷನ್ ಯೋಜನೆಗೆ ಯಾವ ವಿದೇಶದ ನೆರವು ದೊರಕಿದೆ ಹಾಗೂ ಆದರ ಪ್ರಮಾಣವೇನು;

ಆ) ಸದರಿ ಯೋಜನೆಗೆ ಎಷ್ಟು ಎಕರೆ ಜಮೀನನ್ನು ಕೊಡಲಾಗಿದೆ;

ಇ) ಶಿವಮೊಗ್ಗ-ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸದರಿ ಯೋಜನೆಗೆ ಹಾಗೂ ಅರಣ್ಯ ಅಭಿವೃದ್ಧಿಗಾಗಿ ಕೇಳಲಾದ ಜಮೀನಿನ ವಿಸ್ತೀರ್ಣವೆಷ್ಟು? ಮತ್ತು ಕೊಡಮಾಡಿದ ಜಮೀನೆಷ್ಟು;

ಈ) ಮೇಲಿನ ಜಿಲ್ಲೆಗಳಲ್ಲದೆ ಬೇರೆ ಜಿಲ್ಲೆಗಳಿಗೆ ಸೇರಿದ ಜಮೀನನ್ನು ಈ ಯೋಜನೆಗೆ ಕೊಡಲಾಗಿದೆಯೇ, ಹಾಗಿದ್ದಲ್ಲಿ ವಿವರಗಳೇನು?